

# ‘ಕಥೆಗೆ ತಿರುವು ತಂದ ತುಳಸಿ

■ ರಾಘವೇಂದ್ರ ಕೆ.

**ಗಗನಾ ಕುಂಚಿ**
**ಉದಯದ ‘ಮೈನಾ’ ತುಳಸಿ**

◆ **ಬಾಲ್ಯದಲ್ಲಿಯೇ ನಟನೆಯನ್ನು ಪ್ರವೇಶ ಮಾಡಿದ್ದು ಹೇಗೆ?**

ಅದು ಅಮ್ಮನ ಕನಸೂ ಆಗಿತ್ತು. ಒಮ್ಮೆಯಾದರೂ ಟೀವಿಯಲ್ಲಿ ನನ್ನನ್ನು ನೋಡಬೇಕು ಎಂದು ಅವರು ಹೇಳುತ್ತಿದ್ದರು. ಅದೃಷ್ಟಕ್ಕೆ ಅವರಾಸೆಯಂತೆ ಅವಕಾಶವೂ ಸಿಕ್ಕಿತು. ನಂತರ ಡಾನ್ಸ್ ರಿಯಾಲಿಟಿ ಶೋನಲ್ಲಿ ಸ್ಪರ್ಧಿಯಾದೆ. ಅದರ ನಂತರ ನಿರೂಪಣೆಗೆ ಅವಕಾಶ ಸಿಕ್ಕಿತು. ಚಿಕ್ಕವಯಸ್ಸಿನಲ್ಲಿಯೇ ಉದಯದ ‘ಚಿಂಟು’ ವಾಹಿನಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಿರೂಪಿಸಿದ್ದೇನೆ. ಅದಾದ ಮೇಲೆ ಅಭಿನಯವನ್ನೇ ವೃತ್ತಿಯಾಗಿ ತೆಗೆದುಕೊಳ್ಳುವಂತಹ ನಿರ್ಧಾರವನ್ನು ತೆಗೆದುಕೊಂಡೆ. ‘ದೊಡ್ಡಮನೆ ಸೊಸೆ’ಯಲ್ಲಿ ನಾಯಕಿ ಆಗುವ ಮೂಲಕ ಪೂರ್ಣಪ್ರಮಾಣದಲ್ಲಿ ಅಭಿನಯವನ್ನು ಆರಂಭಿಸಿದೆ. ಅದು ಮುಗಿಯುತ್ತಿದ್ದಂತೆ ‘ಮಹಾದೇವಿ’ ಮಾಡಿದೆ. ತಮಿಳಿನಲ್ಲಿಯೂ ನಾಯಕಿಯ ಪಾತ್ರವನ್ನು ಮಾಡಿದೆ. ಮತ್ತೆ ‘ಡಾನ್ಸ್ ಕರ್ನಾಟಕ ಡಾನ್ಸ್’ ಕಾರ್ಯಕ್ರಮದಲ್ಲಿ ತೊಡಗಿದೆ. ‘ಗಟ್ಟಿಮೇಳ’ ಮುಗಿಸಿ ಈಗ ‘ಮೈನಾ’ದಲ್ಲಿ ರಂಗಪ್ರವೇಶ ಆಗಿದೆ.

◆ **ಬಾಲ್ಯದಲ್ಲಿ ಏನಾಗಬೇಕು ಎನ್ನುವ ಆಸೆ ಇತ್ತು?**

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದೆ. ಶಾಲಾ ದಿನಗಳಲ್ಲಿಯೇ ನಿರೂಪಣೆ ಆರಂಭಿಸಿದೆ. ಕಾಲೇಜು ದಿನಗಳಲ್ಲಿಯೂ ಪ್ರೋತ್ಸಾಹ ಸಿಕ್ಕಿದ್ದರಿಂದ ಅಭಿನಯಿಸಲು ಅನುಕೂಲ ಆಯಿತು. ನಟಿ ಆಗಬೇಕು ಎನ್ನುವುದು ಒಲವಾಗಿತ್ತು. ಅದಕ್ಕೆ ಪ್ರೇರಕ ಶಕ್ತಿಯನ್ನು ತುಂಬಿದ್ದು ಅಮ್ಮನ ಪ್ರೋತ್ಸಾಹ. ಅದು ನನ್ನಲ್ಲಿ ಬಣ್ಣ ಬಣ್ಣದ ಕನಸುಗಳನ್ನು ಕಟ್ಟಿತು. ಆಸಕ್ತಿ ಇರುವ ಕಾರಣಕ್ಕೆ ಒಂದಲ್ಲ ಒಂದು ಅವಕಾಶ ಅನಿರೀಕ್ಷಿತವಾಗಿ ಸಿಗುತ್ತಾ ಹೋಯಿತು. ಅಭಿನಯ ಮಾತ್ರವಲ್ಲದೆ ಡಾನ್ಸ್, ನಿರೂಪಣೆಯನ್ನೂ ಮಾಡಲು ಸಾಧ್ಯವಾಯಿತು. ಡಾನ್ಸ್ ಮಾಡಲು ಹೋದಾಗ ಅಭಿನಯಕ್ಕೆ ಅವಕಾಶ ಸಿಕ್ಕಿತು.

◆ **ಮುಂದೆ ಎಂತಹ ಪಾತ್ರ ನಿರೀಕ್ಷೆ ಮಾಡುತ್ತೀರಿ?**

ಒಳ್ಳೆಯ ಪಾತ್ರಗಳನ್ನು ಮಾಡಬೇಕು ಎನ್ನುವುದು ದೊಡ್ಡ ಕನಸು ನಿಜ. ಆದರೆ ಬೇರೆ ಬೇರೆ ಜಾನರ್‌ನಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದು ಅದರಲ್ಲಿ ಪ್ರಮುಖ ಅಂಶ. ಒಂದೇ ರೀತಿಯ ಪಾತ್ರಕ್ಕೆ ಯಾವತ್ತೂ ಸೀಮಿತ ಆಗಬಾರದು ಎನ್ನುವುದು ಸಂಕಲ್ಪ. ಎಂತಹ ಸಂಕೀರ್ಣ ಪಾತ್ರವನ್ನು ಕೊಟ್ಟರೂ ಸೈ ಅನ್ನಿಸಿಕೊಳ್ಳಬೇಕು.

◆ **ನಟರಾಗಬೇಕು ಎಂದು ಬಯಸುವವರಿಗೆ ನಿಮ್ಮ ಸಲಹೆ?**

ನಟನೆ ಮಾಡಬೇಕು ಎಂದರೆ ಅಷ್ಟೇ ಆಗದು. ಅದರ ಬಗ್ಗೆ ಆಸಕ್ತಿ ಮತ್ತು ಒಲವು ಎರಡೂ ಇರಬೇಕಾಗುತ್ತದೆ. ಅದಿದ್ದು ಪ್ರಯತ್ನ ಮಾಡಿದರೆ ಅವಕಾಶ ಖಂಡಿತ ಸಿಗುತ್ತದೆ. ಈ ಇಂಡಸ್ಟ್ರಿಯಲ್ಲಿ ಉಳಿಯುವುದು ಅಷ್ಟು ಸುಲಭದ ಮಾತಲ್ಲ. ಅದು ಅಪಾರ ಸಹನೆ ಮತ್ತು ಶ್ರಮವನ್ನು ಬಯಸುತ್ತದೆ. ಕೆಲವೊಮ್ಮೆ ಅವಕಾಶಕ್ಕಾಗಿ ಕಾಯಬೇಕಾಗುತ್ತದೆ. ಈಗ ಯಾವುದೋ ರೀಲ್ಸ್ ಮಾಡುತ್ತಿದ್ದೇವೆ. ನಾಳೆ ಧಾರಾವಾಹಿಯಲ್ಲಿ ಬಂದು ಬಿಡುತ್ತೇವೆ ಎಂದು ನಿರೀಕ್ಷೆ ಮಾಡಲು ಆಗುವುದಿಲ್ಲ. ಆರಂಭದಲ್ಲಿ ನಟನೆಯ ಸಂಭಾವನೆಯಿಂದಲೇ ಬದುಕುತ್ತೇನೆ ಎಂದುಕೊಳ್ಳುವುದೂ ಕಷ್ಟ ಆಗಬಹುದು. ಎಂತಹ ಪಾತ್ರಗಳು ಸಿಗುತ್ತವೆ. ಯಾವುದಕ್ಕೆ ನಾವು ಯಶ್ನಿಸುತ್ತೇವೆ ಎನ್ನುವುದೂ ಮುಖ್ಯ ಆಗುತ್ತದೆ. ಈ ಕ್ಷೇತ್ರ ಮಾತ್ರ ಹೊಸ ಪ್ರತಿಭೆಗಳನ್ನು ಹುಡುಕುತ್ತಿರುತ್ತದೆ. ಅದನ್ನು ಪಡೆಯಲು ಪ್ರಯತ್ನದ ಶ್ರಮ ಬೇಕು ಎಂದು ಹೇಳುವೆ.

◆ **ಸವಾಲು ಒಡ್ಡಿದ ಪಾತ್ರ ಯಾವುದು?**

‘ಮಹಾದೇವಿ’ ಕಷ್ಟ ಅನ್ನಿಸಿತು. ಅದರಲ್ಲಿ ವಾದ್ಯವೊಂದನ್ನು ನುಡಿಸಬೇಕಿತ್ತು. ನುಡಿಸಲು ನನ್ನಿಂದ ಸಾಧ್ಯವೇ ಇಲ್ಲ. ಆದರೂ ಹಾಗೆ ನಟಿಸಬೇಕಿತ್ತು. ವಾದ್ಯವನ್ನು ಹಿಡಿದುಕೊಳ್ಳುವ ಬಗೆ, ಕೌಶಲ್ಯ ಪ್ರದರ್ಶಿಸುವುದು ಕಷ್ಟ ಆಗುತ್ತಿತ್ತು. ಅದು ನಿಜಕ್ಕೂ ಸವಾಲಾಗಿತ್ತು. ಅಂತಹ ಸಂದರ್ಭದಲ್ಲಿ ನಿರ್ದೇಶಕರು ಸಹಾಯ ಮಾಡುತ್ತಿದ್ದರು. ಕಷ್ಟ ಅನ್ನಿಸಿದಾಗಲೆಲ್ಲ ತಂಡ ನೆರವಿಗೆ ಧಾವಿಸುತ್ತಿತ್ತು. ಅದಕ್ಕೆ ಸಂಬಂಧಿಸಿದ ಹಲವು ವಿಡಿಯೊಗಳನ್ನು ನೋಡಿ ಕಲಿಯುತ್ತಿದ್ದೆ. ಮಾಹಿತಿಯನ್ನು ಸಂಗ್ರಹಿಸಿ ಆಸಕ್ತಿಯಿಂದ ಕಲಿತು ಪ್ರದರ್ಶಿಸುತ್ತಿದ್ದೆ.

◆ **ತುಳಸಿಯ ರಂಗ ಪ್ರವೇಶದ ವಿಶೇಷ ಏನು?**

‘ಮೈನಾ’ ಧಾರಾವಾಹಿಗೆ ಹೊಸದಾಗಿ ತುಳಸಿ ಪ್ರವೇಶ ಮಾಡಿದ್ದಾಳೆ. ಮೈನಾ ಮತ್ತು ಧ್ರುವ ಪರಸ್ಪರ ಇಷ್ಟಪಡುತ್ತಿರುತ್ತಾರೆ. ಅವರಿಬ್ಬರೂ ಮದುವೆ ಆಗಲೇಬೇಕು ಎಂದು ನಮ್ಮ ಅತ್ತೆ ಹೇಳಿರುತ್ತಾರೆ. ಮಾವನ ಜೀವನ ಚೆನ್ನಾಗಿರಬೇಕು. ಅವರಿಬ್ಬರು ಮದುವೆ ಆಗಬೇಕು ಎಂದು ಬಯಸುತ್ತಿದ್ದಾರೆ ಎಂದು ನನಗೆ ಗೊತ್ತು. ಅವರ ಕುಟುಂಬ ಚೆನ್ನಾಗಿರಲಿ ಎಂದು ಪ್ರೀತಿಯನ್ನು ತ್ಯಾಗ ಮಾಡಿರುತ್ತೇನೆ. ಅದು ಧ್ರುವನಿಗೆ ಇಷ್ಟ ಆಗಿದೆ. ಮೈನಾಳಿಂದ ಕಥೆಗೆ ಟ್ವಿಸ್ಟ್ ಸಿಗುತ್ತಿದೆ. ಈ ವಿಷಯದಲ್ಲಿ ತುಳಸಿ ನಿಲುವು ಏನು? ಆಕೆ ಯಾವ ನಿರ್ಧಾರ ತೆಗೆದುಕೊಳ್ಳುತ್ತಾಳೆ ಎನ್ನುವುದರ ಮೇಲೆ ಕಥೆ ತನ್ನ ಹರವನ್ನು ವಿಸ್ತರಿಸುತ್ತದೆ. ಇದು ಕುತೂಹಲದ ಘಟ್ಟ. ■